ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/67/2013-14. ದಿನಾಂಕ:20-06-2016.

| ವಾದಿಗಳು | ಪ್ರತಿವಾದಿಗಳು |
|---|---|
| ತಿಪ್ಪಮ್ಮ ಗಂಡ ಲೇಟ್ ಕರಿಯಪ್ಪ<br>ಚಿರಿಬಿ. ಗ್ರಾಮ<br>ಕೂಡ್ಲಿಗಿ ತಾಲೂಕು | 1)ದುರುಗಪ್ಪ ತಂದೆ ಕ್ಯಾರಕಟ್ಟೆಪ್ಪ<br>2)ಕೊಟ್ರಪ್ಪ ತಂದೆ ಕ್ಯಾರಕಟ್ಟೆಪ್ಪ<br>3)ಕಲ್ಲಪ್ಪ ತಂದೆ ಕ್ಯಾರಕಟ್ಟೆಪ್ಪ<br>ಚಿರಿಬಿ ಗ್ರಾಮ<br>ಕೂಡ್ಲಿಗಿ ತಾಲೂಕು |

ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 143/2. ವಿಸ್ತೀರ್ಣ 7-11. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 143/2. ವಿಸ್ತೀರ್ಣ 7-11. ಎಕ್ರೆ ಜಮೀನನ್ನು ಸದರಿ ತಾಲೂಕು ಚಿರಿಬಿ ಗ್ರಾಮದ ತಿಪ್ಪಮ್ಮ ಗಂಡ ಲೇಟ್ ಕರಿಯಪ್ಪ. ಇವರು ದಿನಾಂಕ 30-04-2010. ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಸುಂಕದಕಲ್ಲು ಇವರು ನಮೂನೆ-21 ನೋಟಿಸನ್ನು ದಿನಾಂಕ 16-06-2010. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಚಿರಿಬಿ ಗ್ರಾಮದ ದುರುಗಪ್ಪ ತಂದೆ ಕ್ಯಾರಕಟ್ಟೆಪ್ಪ. ಕೊಟ್ರಪ್ಪ ತಂದೆ ಕ್ಯಾರಕಟ್ಟೆಪ್ಪ. ಕಲ್ಲಪ್ಪ ತಂದೆ ಕ್ಯಾರಕಟ್ಟೆಪ್ಪ.ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 41/2009-10. ದಿನಾಂಕ 21-07-2010. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 12-08-2013 ರಿಂದ 20-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರ ಸುಂಕದಕಲ್ಲು ಗ್ರಾಮದ ಸನಂ 143/2. ವಿಸ್ತೀರ್ಣ 7-11. ಎಕ್ರೆ ಜಮೀನು ನಮ್ಮ ಮಾವನವರಾದ ಗೊಲ್ಲರ ಹಟ್ಟೆಪ್ಪ ತಂದೆ ಪೂರ ಭೀಮಪ್ಪ. ಇವರ ಹೆಸರಲ್ಲಿದ್ದು ಇವರು ದಿನಾಂಕ 18-09-1975. ನಿಧನ ಹೊಂದಿದ್ದು ನಾವುಗಳು ಸದರಿ ಜಮೀನನ್ನು ದಿನಾಂಕ 30-04-2010 ರಂದು ಪಾಲು ವಿಭಾಗದ ಪತ್ರ ಬರೆಯಿಸಿದ್ದು ಸದರಿ ಪಾಲು ವಿಭಾಗದ ಪತ್ರ ಪ್ರಕಾರ ನನ್ನ ಹಿಸ್ಯಾಕ್ಕೆ ಬಂದಿರುವುದರಿಂದ ಸದರಿ ಪಾಲು ವಿಭಾಗದ ಪತ್ರದಂತೆ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿದ್ದು ಅವರು ಸದರಿ ವಿವಾದಿತ ಜಮೀನನ್ನು ದಿನಾಂಕ 26-04-2010 ರಂದು ಪಾಲು ವಿಭಾಗ ಮಾಡಿ ಕೊಂಡಿದ್ದು ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಿ ಕೊಂಡಿರುವುದಿಲ್ಲ ಕಾರಣ ಅದನ್ನು ನಾವು ಇನ್ನೂ ನಾವು ಇತ್ಯರ್ಥ ಮಾಡಿ ಕೊಂಡಿರುವುದಿಲ್ಲ ಸದರಿ ಪಾಲು ವಿಭಾಗದ ಪತ್ರದಂತೆ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದೆಂದು ಅರ್ಜಿ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರು ಈ ಪ್ರಕರಣದಲ್ಲಿ ಯಾವುದೇ ಆಸಕ್ತೀ ಇಲ್ಲವೆಂದು ಬಾವಿಸಿ ಸದರಿಯವರು ತಮ್ಮ ಹಕ್ಕನ್ನು ಸಾಧಿಸುವುದಕ್ಕಾಗಿ ಮಾನ್ಯ ನ್ಯಾಯಾಲಯದ ಮೋರೆ ಹೋಗುವಂತೆ ಸೂಚಿಸಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಸುಂಕದಕಲ್ಲು ಗ್ರಾಮದ ಸನಂ 143/2. ವಿಸ್ತೀರ್ಣ 7-11. ಎಕ್ರೆ ಜಮೀನಿನ ಅರ್ಜಿದಾರರು ಈ ಪ್ರಕರಣದಲ್ಲಿ ಯಾವುದೇ ಆಸಕ್ತಿ ಇಲ್ಲವೆಂದು ಬಾವಿಸಿ ಅರ್ಜಿದಾರರು ತಮ್ಮ ಹಕ್ಕನ್ನು ಸಾಧಿಸುವುದಕ್ಕಾಗಿ ಮಾನ್ಯ ನ್ಯಾಯಾಲಯದ ಮೋರೆ ಹೊಗುವಂತೆ ಸೂಚಿಸುತ್ತಾ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ತಿಪ್ಪಮ್ಮ ಗಂಡ ... ಹನುಮಪ್ಪ. ಚಿರಿಬಿ. ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ದುರುಗಪ್ಪ ತಂದೆ ಕ್ಯಾರಕಟ್ಟೆಪ್ಪ. ಕೊಟ್ರಪ್ಪ ತಂದೆ ಕ್ಯಾರಕಟ್ಟೆಪ್ಪ. ಕಲ್ಲಪ್ಪ ತಂದೆ ಕ್ಯಾರಕಟ್ಟೆಪ್ಪ ಚಿರಿಬಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.